Akashvani : Bengaluru
National Bulletin In Kannada
27.08.2025 : 1310hrs

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

27.08.2025 : 1310hrs

*******

**ಮುಖ್ಯಾಂಶಗಳು:**

1. ಭಾರತ ಎಂದೂ ಯುದ್ಧವನ್ನು ಅರಸುವ ರಾಷ್ಟ್ರವಲ್ಲ, ಆದರೆ ಎದುರಾಗುವ ಸವಾಲಿಗೆ ತಕ್ಕ ಉತ್ತರ ನೀಡುತ್ತದೆ - ರಕ್ಷಣಾ ಸಚಿವ ರಾಜನಾಥ್ ಸಿಂಗ್
2. ಜಮ್ಮು ಕಾಶ್ಮೀರದ ಕತ್ರಾದಲ್ಲಿ ಭಾರೀ ಮಳೆ; ವೈಷ್ಣೋದೇವಿ ಮಾರ್ಗದಲ್ಲಿ ಭೂಕುಸಿತ; ಹಲವರ ಸಾವಿನ ಶಂಕೆ
3. ದೇಶಾದ್ಯಂತ ಗಣೇಶ ಚತುರ್ಥಿ ಆಚರಣೆ; ರಾಷ್ಟ್ರಪತಿ, ಪ್ರಧಾನಿ ಸೇರಿದಂತೆ ಗಣ್ಯರಿಂದ ಶುಭಾಶಯ
4. ಭದ್ರತಾ ಮಂಡಳಿಯ ಸುಧಾರಣೆಕುರಿತ ಚರ್ಚೆಯನ್ನು ಮುಂದೂಡಿದಕ್ಕೆ ವಿಶ್ವಸಂಸ್ಥೆ ಸಾಮಾನ್ಯ ಸಭೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿದ ಜಿ-೪ ರಾಷ್ಟ್ರಗಳು
5. ಫಿಡೆ ಚೆಸ್ ವಿಶ್ವಕಪ್; ಗೋವಾದಲ್ಲಿ ಅಕ್ಟೋಬರ್ ೩೦ರಿಂದ ಆಯೋಜನೆ; ಪ್ರಧಾನಿ ಸಂತಸ

******

ಭಾರತ ಎಂದೂ ಯುದ್ಧವನ್ನು ಅರಸುವ ರಾಷ್ಟ್ರವಲ್ಲ, ಆದರೆ ಸವಾಲು ಎದುರಾದಾಗ ಅದಕ್ಕೆ ಪ್ರತಿಯಾಗಿ ನಿರ್ಣಾಯಕ ಶಕ್ತಿಯೊಂದಿಗೆ ಉತ್ತರಿಸಲಾಗುವುದು ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ. ಮಧ್ಯಪ್ರದೇಶದಲ್ಲಿ ನಡೆಯುತ್ತಿರುವ ಮೂರು ಸೇನಾಪಡೆಗಳ ಸಮ್ಮೇಳನ ರಣ್ ಸಂವಾದ್ - ೨೦೨೫ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ಉದಯೋನ್ಮುಖ ಸವಾಲುಗಳನ್ನು ಎದುರಿಸಲು ರಕ್ಷಣಾ ಸನ್ನದ್ಧತೆಯನ್ನು ನಿರಂತರವಾಗಿ ಉನ್ನತೀಕರಿಸುವ ಬಗ್ಗೆ ಒತ್ತಿ ಹೇಳಿದರು.  ಈ ಕಾರ್ಯಕ್ರಮದ ಹೆಸರಿನಲ್ಲೇ ಯುದ್ಧ ಹಾಗೂ ಸಂಘರ್ಷದ ಜೊತೆ ಜೊತೆಗೆ

ಸಂವಾದ ಮತ್ತು ರಾಜತಾಂತ್ರಿಕ ಪರಿಹಾರದ ಛಾಯೆ ಇದೆ. ಆಪರೇಷನ್ ಸಿಂದೂರ್, ತಂತ್ರಜ್ಞಾನ ಚಾಲಿತ ಯುದ್ಧದ ಹಾಗೂ ಬದಲಾಗುತ್ತಿರುವ ಆಧುನಿಕ ಯುದ್ಧದ ಒಂದು ಉತ್ತಮ ಉದಾಹರಣೆಯಾಗಿದೆ. ಕಳೆದ ೧೦ ರಿಂದ ೨೦ ವರ್ಷಗಳಲ್ಲಿ ಯುದ್ಧ ನಡೆಸುವ ರೀತಿಯಲ್ಲಿ ವೇಗವಾಗಿ ಬದಲಾವಣೆಗಳಾಗಿವೆ ಎಂದು ಹೇಳಿದರು.

***ಧ್ವನಿ****ರಾಜನಾಥ್ ಸಿಂಗ್

ಈ ವಿನೂತನ ಕಾರ್ಯಕ್ರಮ ತಂತ್ರಜ್ಞಾನ ಮತ್ತು ಆಧುನಿಕ ಯುದ್ಧಗಳಲ್ಲಿ ಅದರ ಪಾತ್ರದ ಕುರಿತು ವಿಚಾರ ವಿನಿಮಯ ಮಾಡಿಕೊಳ್ಳಲು ಸೇನೆಯ ಮೂರೂ ಪಡೆಗಳನ್ನು ಒಂದೇ ವೇದಿಕೆಯಡಿ ಒಟ್ಟುಗೂಡಿಸಿದೆ. ಕಾರ್ಯಕ್ರಮದಲ್ಲಿ ಸೇನಾ ಸಿಬ್ಬಂದಿ ಮುಖ್ಯಸ್ಥರಾದ ಜನರಲ್ ಅನಿಲ್ ಚವ್ಹಾಣ್, ಏರ್ ಚೀಫ್ ಮಾರ್ಷಲ್ ಎ.ಪಿ. ಸಿಂಗ್, ಅಡ್ಮಿರಲ್ ದಿನೇಶ್ ಕೆ. ತ್ರಿಪಾಠಿ ಪಾಲ್ಗೊಂಡಿದ್ದರು.

******

ಜಮ್ಮು ಕಾಶ್ಮೀರದ ಕತ್ರಾದಲ್ಲಿ ಸುರಿಯುತ್ತಿರುವ ಭಾರೀ ಮಳೆಯಿಂದ ಜನಜೀವನ ಅಸ್ತವ್ಯಸ್ತಗೊಂಡಿದ್ದು, ವೈಷ್ಣೋದೇವಿ ಮಾರ್ಗದಲ್ಲಿ ಉಂಟಾದ ಭೂಕುಸಿತದಿಂದ ಇದುವರೆಗೆ ಹಲವು ಮಂದಿ ಪ್ರಾಣ ಕಳೆದುಕೊಂಡಿರುವುದು ವರದಿಯಾಗಿದೆ. ಸತತ ಮಳೆಯಿಂದಾಗಿ ಉಂಟಾಗಿರುವ ಪ್ರವಾಹ ಪರಿಸ್ಥಿತಿಯಲ್ಲಿ ಜನರ ರಕ್ಷಣೆಗೆ ಕೇಂದ್ರ ಮೀಸಲು ಪೊಲೀಸ್ ಪಡೆ ತಕ್ಷಣ ಕಾರ್ಯಾಚರಣೆ ಕೈಗೊಂಡಿದ್ದು, ಗಾಯಾಳುಗಳನ್ನು ಚಿಕಿತ್ಸೆಗಾಗಿ ಕತ್ರಾದ ಸಮುದಾಯ ಆರೋಗ್ಯ ಕೇಂದ್ರಕ್ಕೆ ರವಾನಿಸಲಾಗಿದೆ. ವೈಷ್ಣೋದೇವಿ ದರ್ಶಕ್ಕೆ ಬಂದಿದ್ದ ಪ್ರವಾಸಿಗರು ನೆರೆಯಲ್ಲಿ ಸಿಲುಕಿದ್ದು ಅವರ ರಕ್ಷಣೆ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವ ಕಾರ್ಯ ನಡೆಯುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಕತ್ರಾದಲ್ಲಿನ ನೆರೆ ಪರಿಸ್ಥಿತಿಯ ಬಗ್ಗೆ ಖುದ್ದು ಮಾಹಿತಿ ಪಡೆಯುತ್ತಿದ್ದಾರೆ.  ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ  ಪ್ರವಾಹದಿಂದ ಪ್ರಾಣ ಕಳೆದುಕೊಂಡವರಿಗೆ ಸಂತಾಪ ಸೂಚಿಸಿದ್ದು, ಸಂತ್ರಸ್ತರಿಗೆ ಬೇಕಾದ ಸೌಲಭ್ಯಗಳನ್ನು ತುರ್ತಾಗಿ ಒದಗಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಕೇಂದ್ರ ಸಚಿವ ಡಾಕ್ಟರ್ ಜಿತೇಂದ್ರ ಸಿಂಗ್,  ರಕ್ಷಣಾ ಕಾರ್ಯಾಚರಣೆಯಲ್ಲಿ ಎಸ್‌ಡಿಆರ್‌ಎಫ್, ಎನ್‌ಡಿಆರ್‌ಎಫ್, ಸೇನೆ, ಅರೆಸೇನೆ ಮತ್ತು ವಾಯುಪಡೆ ಅಧಿಕಾರಿಗಳು ಸ್ಥಳೀಯ ಆಡಳಿತ ವ್ಯವಸ್ಥೆಯೊಂದಿಗೆ ನಿಕಟ ಸಂಪರ್ಕದಲ್ಲಿದ್ದು ಬೇಕಾದ ಎಲ್ಲಾ ನೆರವುಗಳನ್ನು ನೀಡಲಾಗುತ್ತಿದೆ.

ಶೀಘ್ರವೇ ಸ್ಥಗಿತಗೊಂಡಿರುವ ವಿದ್ಯುತ್ ಸಂಪರ್ಕ,ನೀರು ಮತ್ತು ಮೊಬೈಲ್ ಸಂಪರ್ಕವನ್ನು ಮರುಸ್ಥಾಪಿಸಲು ನಿರಂತರವಾಗಿ ಕೆಲಸ ಮಾಡಲಾಗುತ್ತಿದೆ ಎಂದು ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದ್ದಾರೆ.ಈ ನಡುವೆ ಬನಿಹಾಳ್, ರಾಂಬನ್, ಉದಮ್ ಪುರ್, ನಗ್ರೋತಾ ದಲ್ಲಿ ಭಾರೀ ಮಳೆಯೊಂದಿಗೆ ಅಲ್ಲಲ್ಲಿ ಭೂಕುಸಿತವಾಗುವ ಸಂಭವವಿದೆ ಎಂದು ವರದಿಯಾಗಿದೆ. ಜಮ್ಮು ವಿಭಾಗದ ರಜೌರಿ ಮತ್ತು ಪೂಂಚ್‌ಗಳ ಅವಳಿ ಗಡಿ ಜಿಲ್ಲೆಗಳನ್ನು ಶೋಪಿಯಾನ್ ಜಿಲ್ಲೆಯೊಂದಿಗೆ ಸಂಪರ್ಕಿಸುವ ಐತಿಹಾಸಿಕ ಮೊಘಲ್ ರಸ್ತೆಯಲ್ಲಿ ಭೂಕುಸಿತದಿಂದ ವಾಹನ ಸಂಚಾರಸ್ಥಗಿತ ಗೊಂಡಿದೆ.

******

ಪಂಜಾಬ್‌ನಲ್ಲಿ ರಾವಿ ಬಿಯಾಸ್ ಮತ್ತು ಸಟ್ಲೇಜ್ ನದಿಗಳು ಉಕ್ಕಿ ಹರಿಯುತ್ತಿದ್ದು, ಪ್ರವಾಹ ಪರಿಸ್ಥಿತಿ ದಿನದಿಂದ ದಿನಕ್ಕೇ ಗಂಭೀರವಾಗುತ್ತಿದೆ. ಹಲವು ಜಿಲ್ಲೆಗಳಲ್ಲಿ ಕಟ್ಟೆಚ್ಚರ ಘೋಷಿಸಲಾಗಿದ್ದು, ಅಧಿಕಾರಿಗಳಿಗೆ ರಜೆಗಳನ್ನು ರದ್ದುಪಡಿಸಲಾಗಿದೆ. ಅಮೃತಸರದಲ್ಲಿಯೂ ಹೈಅಲರ್ಟ್ ಘೋಷಿಸಲಾಗಿದೆ. ಬಾಕ್ರಾ ಅಣೆಕಟ್ಟೆಯಿಂದ ಕಳೆದ ಒಂದು ವಾರದಿಂದ ನೀರು ಬಿಡುಗಡೆ ಮಾಡಲಾಗುತ್ತಿದ್ದು, ಅಣೆಕಟ್ಟೆಗೆ ಯಾವುದೇ ಹಾನಿಯಾಗದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ.

******

ದೇಶಾದ್ಯಂತ ಇಂದು ಗಣೇಶ ಚತುರ್ಥಿ ಸಂಭ್ರಮ. ಮನೆ ಮನೆಗಳಲ್ಲಿ ಗಣಪತಿಯನ್ನು ಪೂಜಿಸಲು ಪೂಜಿಸಲಾಗುತ್ತಿದೆ. ಗಣೇಶ ಬಂದನೆಂದರೆ ಎಲ್ಲೆಡೆ ಉತ್ಸಾಹ ಮತ್ತು ಭಕ್ತಿ ಭಾವದ ಅಲೆ. ಹಬ್ಬದ ಅಂಗವಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ರಾಷ್ಟ್ರದ ಸಮಸ್ತ ಜನತೆಗೆ ಶುಭಾಶಯ ಕೋರಿದ್ದಾರೆ. ಸಾಮಾಜಿಕ ಮಾಧ್ಯಮ ಸಂದೇಶದಲ್ಲಿ ರಾಷ್ಟ್ರಪತಿ, ಗಣೇಶ ಚತುರ್ಥಿಯನ್ನು ಜ್ಞಾನ ಮತ್ತು ವಿವೇಕದ ದೇವರಾದ ಗಣಪತಿಯ ಆರಾಧನೆಯೊಂದಿಗೆ ಬಹಳ ಸಂತೋಷದಿಂದ ಆಚರಿಸಲಾಗುತ್ತದೆ. ಜೀವನದ ಅಡೆತಡೆಗಳನ್ನು ನಾಶಮಾಡುವ ಭಗವಾನ್ ಗಣೇಶನು ವೈಯಕ್ತಿಕ ಅಭಿವೃದ್ಧಿ ಮತ್ತು ರಾಷ್ಟ್ರ ನಿರ್ಮಾಣದ ಹಾದಿಯಲ್ಲಿರುವ ಎಲ್ಲಾ ಅಡೆತಡೆಗಳನ್ನು ತೆಗೆದುಹಾಕಲಿ ಮತ್ತು ಭಗವಂತನ ಆಶೀರ್ವಾದದೊಂದಿಗೆ, ಎಲ್ಲಾ ದೇಶವಾಸಿಗಳು ಪರಿಸರಸ್ನೇಹಿ ಜೀವನಶೈಲಿಯನ್ನು ಅಳವಡಿಸಿಕೊಂಡು, ಬಲಿಷ್ಠ ಭಾರತವನ್ನು

ನಿರ್ಮಿಸುವಲ್ಲಿ ಭಕ್ತಿಯಿಂದ ಕೆಲಸ ಮಾಡುವುದನ್ನು ಮುಂದುವರಿಸಲಿ ಎಂದು ಪ್ರಾರ್ಥಿಸಿ ಶುಭ ಕೋರಿದ್ದಾರೆ. ಪ್ರಧಾನಿ ತಮ್ಮ ಸಂದೇಶದಲ್ಲಿ, ಭಕ್ತಿಭಾವ ಮತ್ತು ನಂಬಿಕೆಯಿಂದ ತುಂಬಿದ ಈ ಪವಿತ್ರ ಹಬ್ಬ ಎಲ್ಲರ ಜೀವನದಲ್ಲಿ ಶುಭವನ್ನು ತರಲಿ. ವಿಘ್ನನಿವಾರಕ ಗಣೇಶನು ತನ್ನ ಭಕ್ತರಿಗೆ ಸಂತೋಷ, ಶಾಂತಿ ಮತ್ತು ಉತ್ತಮ ಆರೋಗ್ಯ ನೀಡಲಿ ಎಂದು ಪ್ರಾರ್ಥಿಸಿದ್ದಾರೆ.

******

ವಿಶ್ವ ಸಂಸ್ಥೆ ಸಾಮಾನ್ಯ ಸಭೆ ೧೭ನೇ ಬಾರಿ ಭದ್ರತಾ ಮಂಡಳಿಯ ಸುಧಾರಣೆಕುರಿತ ಚರ್ಚೆಯನ್ನು ಮುಂದಿನ ಅಧಿವೇಶನಕ್ಕೆ ಮುಂದೂಡಿದೆ. ಈ ನಿರ್ಧಾರದ ಕುರಿತು ಜಿ೪ ರಾಷ್ಟ್ರಗಳಾದ ಭಾರತ, ಬ್ರೆಜಿಲ್, ಜರ್ಮನಿ ಮತ್ತು ಜಪಾನ್ ತೀವ್ರ ಅಸಮಾಧಾನ ವ್ಯಕ್ತಪಡಿಸಿವೆ. ಜಿ೪ ರಾಷ್ಟ್ರಗಳು ಭದ್ರತಾ ಮಂಡಳಿಯಲ್ಲಿ ಖಾಯಂ ಮತ್ತು ಖಾಯಂ-ಅಲ್ಲದ ಸ್ಥಾನಗಳ ವಿಸ್ತರಣೆಗಾಗಿ ಬೆಂಬಲ ನೀಡುತ್ತವೆ.ಜಿ೪ ರಾಷ್ಟ್ರಗಳ ಪರವಾಗಿ ಹೇಳಿಕೆ ನೀಡಿದ ಜಪಾನ್, ಈ ನಿರ್ಧಾರ, ವಿಶ್ವಸಂಸ್ಥೆಯ ಮತ್ತು ಅಂತಾರಾಷ್ಟ್ರೀಯ ವ್ಯವಸ್ಥೆಯನ್ನು ಸಮತೋಲನದಲ್ಲಿಡುವ ಅದರ ಸಾಮರ್ಥ್ಯದ ಮೇಲೆ ಜಾಗತಿಕ ವಿಶ್ವಾಸಾರ್ಹತೆಗೆ ಧಕ್ಕೆ ತರುತ್ತದೆ ಎಂದು ತಿಳಿಸಿದೆ. ಜಿ೪ ರಾಷ್ಟ್ರಗಳು ಕಳೆದ ಹಲವು ವರ್ಷಗಳಿಂದ ವಿಶ್ವ ಸಂಸ್ಥೆ ಭದ್ರತಾ ಮಂಡಳಿಯಲ್ಲಿ ಖಾಯಂ ಸದಸ್ಯತ್ವಕ್ಕಾಗಿ ಪ್ರಯತ್ನಿಸುತ್ತಿದ್ದು, ಅಭಿವೃದ್ಧಿಶೀಲ ರಾಷ್ಟ್ರಗಳ ಪ್ರಾತಿನಿಧ್ಯದ ಅಗತ್ಯವಿದೆ ಎಂದು ಆಗ್ರಹಿಸುತ್ತಿವೆ.

******

ದಕ್ಷಿಣ ಗಾಜಾದ ನಾಸರ್ ಆಸ್ಪತ್ರೆಯ ಮೇಲೆ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಕನಿಷ್ಠ ೨೦ ಮಂದಿ ಮೃತಪಟ್ಟಿದ್ದು, ಅವರಲ್ಲಿ ಅಂತರರಾಷ್ಟ್ರೀಯ ಮಾಧ್ಯಮ ಸಂಸ್ಥೆಗಳಿಗೆ ಸೇರಿದ ಐದು ಮಂದಿ ಪತ್ರಕರ್ತರೂ ಸೇರಿದ್ದಾರೆ ಎಂದು ವರದಿಯಾಗಿದೆ. ಈ ಕುರಿತು ವಿಷಾದ ವ್ಯಕ್ತಪಡಿಸಿರುವ ಭಾರತೀಯ ವಿದೇಶಾಂಗ ಸಚಿವಾಲಯ, ಇಸ್ರೇಲ್-ಹಮಾಸ್ ಸಂಘರ್ಷದಲ್ಲಿ ನಾಗರಿಕರು ಪ್ರಾಣ ಕಳೆದುಕೊಳ್ಳುತ್ತಿರುವುದನ್ನು ಭಾರತ ನಿರಂತರವಾಗಿ ಖಂಡಿಸುತ್ತಾ ಬಂದಿದೆ ಎಂದು ಹೇಳಿಕೆಯಲ್ಲಿ ತಿಳಿಸಿದೆ.

******

ರಕ್ಷಣಾ ಸಚಿವಾಲಯವು, ಭಾರತದ ಗುಣಮಟ್ಟ ಸಮಿತಿಯೊಂದಿಗೆ ತಿಳುವಳಿಕಾ ಪತ್ರವೊಂದಕ್ಕೆ ಸಹಿ ಹಾಕಿದೆ. ಇದರಿಂದಾಗಿ ೬೩ ಲಕ್ಷ ಮಾಜಿ ಸೈನಿಕರು ಮತ್ತು ಅವರ ಅವಲಂಬಿತರಿಗೆ ಪಿಂಚಣಿ ಆರೋಗ್ಯ ರಕ್ಷಣೆ, ಪುನರ್ವಸತಿ ಮತ್ತು ಕಲ್ಯಾಣ ಸೇವೆಗಳಿಗೆ ಸಹಕಾರಿಯಾಗಲಿದೆ. ಮಾಜಿ ಸೈನಿಕರ ಕಲ್ಯಾಣ ಇಲಾಖೆಗೆ ಸೂಕ್ತ ಮಾರ್ಗದರ್ಶನ ನೀಡುವುದು ಡಿಜಿಟಲ್ ಸುಧಾರಣೆಗಳಿಗೆ ಸಂಬಂಧಪಟ್ಟಂತೆ ಸರ್ಕಾರಕ್ಕೆ ಹಾಗೂ ಜಿಲ್ಲಾ ಸೈನಿಕ ಮಂಡಳಿಗಳು ಮತ್ತು ಸಶಸ್ತ್ರ ಪಡೆಗಳ ಕೇಂದ್ರಗಳು ಮುಂತಾದ ಮಾಜಿ ಸೈನಿಕರ ಕಲ್ಯಾಣ ಕಾರ್ಯಕ್ರಮಕ್ಕೆ ಇದು ಬಲ ತುಂಬಲಿದೆ.

******

ಬಠಿಂಡಾದಲ್ಲಿನ ಗುರು ಕಾಶಿ ವಿಶ್ವವಿದ್ಯಾಲಯದ ಜಿಂಬಾಬ್ವೆ ಮೂಲದ ವಿದ್ಯಾರ್ಥಿಯ ಸಾವಿನ ಕುರಿತಾಗಿ ರಾಷ್ಟ್ರೀಯ ಮಾನವ ಹಕ್ಕು ಆಯೋಗ - ಎನ್‌ಎಚ್‌ಆರ್‌ಸಿ ಪಂಜಾಬ್ ಪೊಲೀಸ್ ಮಹಾನಿರ್ದೇಶಕರು ಹಾಗೂ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್‌ಗೆ ನೋಟಿಸ್ ಜಾರಿ ಮಾಡಿದೆ. ಮಾಧ್ಯಮ ವರದಿಗಳ ಆಧಾರದ ಮೇಲೆ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿರುವ ಆಯೋಗ, ಎರಡು ವಾರಗಳಲ್ಲಿ ಸಂಪೂರ್ಣ ವರದಿ ನೀಡುವಂತೆ ಸೂಚಿಸಿದೆ. ಕಳೆದ ವಾರ, ಬಠಿಂಡಾದ ಎಐಐಎಂಎಸ್ ಆಸ್ಪತ್ರೆಯಲ್ಲಿ ವಿದ್ಯಾರ್ಥಿಗಳ ಗುಂಪೊಂದು ಹಲ್ಲೆ ನಡೆಸಿದ ಪರಿಣಾಮ ಗಂಭೀರ ಗಾಯಗೊಂಡು ಸಾವನ್ನಪ್ಪಿದ್ದಾನೆ ಎಂದು ವರದಿಯಾಗಿದೆ. ವರದಿಯ ವಿಷಯಗಳು ಸತ್ಯವಾಗಿದ್ದರೆ, ಅದು ಮಾನವ ಹಕ್ಕುಗಳ ಉಲ್ಲಂಘನೆಯ ಗಂಭೀರ ವಿಚಾರವಾಗಿರುತ್ತದೆ ಎಂದು ಆಯೋಗ ತಿಳಿಸಿದೆ.

******

ಈ ಬಾರಿ ಫಿಡೆ ಚೆಸ್ ವಿಶ್ವಕಪ್ ಪಂದ್ಯಾವಳಿ ಭಾರತದ ಗೋವಾದಲ್ಲಿ ಇದೇ ಅಕ್ಟೋಬರ್ ೩೦ ರಿಂದ ನವೆಂಬರ್ ೨೭ರವರೆಗೆ ನಡೆಯಲಿದೆ. ಎಂಟು ಸುತ್ತಿನ ನಾಕೌಟ್ ಪಂದ್ಯಗಳಲ್ಲಿ ವಿಶ್ವದ ಶ್ರೇಷ್ಠ ೨೦೬ ಚೆಸ್ ಆಟಗಾರರು ಪಂದ್ಯಾವಳಿಯಲ್ಲಿ ಭಾಗವಹಿಸಲಿದ್ದಾರೆ. ಅಗ್ರ ಮೂರು ಸ್ಥಾನ ಪಡೆದವರು ೨೦೨೬ರ ಅಭ್ಯರ್ಥಿಗಳ ಟೂರ್ನಮೆಂಟ್‌ಗೆ ಅರ್ಹತೆ ಪಡೆಯುತ್ತಾರೆ ಎಂದು ಅಂತಾರಾಷ್ಟ್ರೀಯ ಚೆಸ್ ಒಕ್ಕೂಟ ತಿಳಿಸಿದೆ. ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಸಂತೋಷ

ವ್ಯಕ್ತಪಡಿಸಿದ್ದು. ತಮ್ಮ ಎಕ್ಸ್ ಖಾತೆಯಲ್ಲಿ ಎರಡು ದಶಕದ ನಂತರ ಭಾರತವು ಪ್ರತಿಷ್ಠಿತ ಫಿಡೆ ವಿಶ್ವಕಪ್ ೨೦೨೫ಅನ್ನು ಆಯೋಜಿಸುತ್ತಿರುವುದು ಸಂತೋಷದ ವಿಷಯವಾಗಿದೆ. ಚೆಸ್ ನಮ್ಮ ಯುವಕರಲ್ಲಿ ಜನಪ್ರಿಯತೆಯನ್ನು ಗಳಿಸುತ್ತಿದ್ದು ಈ ಪಂದ್ಯಾವಳಿಯು ರೋಮಾಂಚಕ ಪಂದ್ಯಗಳಿಗೆ ಸಾಕ್ಷಿಯಾಗಲಿದೆ ಮತ್ತು ಜಗತ್ತಿನಾದ್ಯಂತದ ಉನ್ನತ ಆಟಗಾರರ ಪ್ರತಿಭೆಯನ್ನು ಪ್ರದರ್ಶಿಸಲಿದೆ ಎಂಬುದು ಖಚಿತವಾಗಿದೆ ಎಂದಿದ್ದಾರೆ.

******

ಭಾರತ ಕ್ರಿಕೆಟ್ ತಂಡದ ಮಾಜಿ ಆಫ್ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್, ವಿದೇಶಿ ಟಿ-೨೦ ಟೂರ್ನಿಗಳಲ್ಲಿ ಆಡುವ ನಿಟ್ಟಿನಲ್ಲಿ ಇಂಡಿಯನ್ ಪ್ರೀಮಿಯರ್ ಲೀಗ್ ಟಿ-೨೦ ಟೂರ್ನಿಯಿಂದ ನಿವೃತ್ತಿ ಘೋಷಿಸಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಈ ಕುರಿತು ಘೋಷಿಸಿರುವ ಅವರು, ಪ್ರತಿಯೊಂದು ಅಂತ್ಯ ಹೊಸ ಪ್ರಾರಂಭದ ಸಂಕೇತ ಆಗಿರುತ್ತದೆ. ಐಪಿಎಲ್‌ನಲ್ಲಿ ಕ್ರಿಕೆಟ್ ಜೀವನ ಅಂತ್ಯಗೊಂಡರೂ ಇತರ ಪಂದ್ಯಾವಳಿಗಳಲ್ಲಿ ಆಟವನ್ನು ಅನ್ವೇಷಿಸಲು ಆರಂಭಿಸುತ್ತಿದ್ದೇನೆ ಎಂದು ತಿಳಿಸಿದ್ದಾರೆ. ಇದೇ ವೇಳೆ ಅವರು, ಐಪಿಎಲ್ ಫ್ರಾಂಚೈಸಿಗಳು ಮತ್ತು ಬಿಸಿಸಿಐಗೆ ಕೃತಜ್ಞತೆ ಸಲ್ಲಿಸಿದ್ದಾರೆ. ಐಪಿಎಲ್‌ನಲ್ಲಿ ಅಶ್ವಿನ್ ಆಡಿರುವ ಒಟ್ಟು ೨೨೧ ಪಂದ್ಯಗಳಲ್ಲಿ ೧೮೭ ವಿಕೆಟ್ ಪಡೆದಿದ್ದು, ಲೀಗ್‌ನ ೫ನೇ ಅತಿ ಹೆಚ್ಚು ವಿಕೆಟ್ ಪಡೆದ ಬೌಲರ್ ಆಗಿದ್ದಾರೆ.

***END***